ಕಷ್ಟಕಾರ್ಪಣ್ಯಗಳು, ಪರಸ್ಪರ ದ್ವೇಷ, ಅಸೂಯೆ, ಕಿತ್ತಾಟಗಳು ಮುಗಿಯುವುದೇ ಇಲ್ಲ. ದೇವರ ಹೆಸರಿನಲ್ಲಿ ನಡೆಯುವ ಕಲಹ- ಕಾದಾಟಗಳು, ಕೊಲೆ- ಸುಲಿಗೆಗಳಿಗೆ ಕೊನೆ ಎಂಬುದಿಲ್ಲ. ಏನೇ ಹರಕೆ ಹೊತ್ತು ಧನ- ಕನಕ ಅರ್ಪಿಸಿದರೂ ಜನರ ಬದುಕಿನ ಬವಣೆಗಳು ನೀಗದಿರುವುದನ್ನು ನೋಡುತ್ತೇವೆ. ದೇವಾಲಯಗಳಿಗೆ ಹೋಗುವಾಗ ಅಥವಾ ಮರಳುವಾಗಲೇ ಅನೇಕರು ಅಪಘಾತದಿಂದ ಮರಣ ಹೊಂದುವುದನ್ನು ಕಾಣುತ್ತೇವೆ. ಇದು ದೇವರ ಕುರಿತು ಭ್ರಮನಿರಸನಕ್ಕೆ ಕಾರಣವಾಗುತ್ತಿದೆ. ಏನೇ ಆದರೂ ಭಕ್ತಾದಿಗಳು ದೇವರಲ್ಲಿ ತಮ್ಮ ಶ್ರದ್ಧೆ, ಭಕ್ತಿಯನ್ನು ಎಳ್ಳಷ್ಟೂ ಕಡಿಮೆ ಮಾಡುವುದಿಲ್ಲ, ದೇವರನ್ನು ಶಂಕಿಸುವುದಿಲ್ಲ, ಪ್ರಶ್ನಿಸುವುದಿಲ್ಲ. ದೇವರ ಮೇಲೆ ಇನ್ನಷ್ಟು ಶ್ರದ್ಧೆ, ದೃಢ ಭಕ್ತಿಯನ್ನು ಇರಿಸುವುದರ ಮೂಲಕ ತಮ್ಮ ಕಷ್ಟಸುಖಗಳಲ್ಲಿ ಸಮಾಧಾನವನ್ನು ಕಂಡುಕೊಳ್ಳುತ್ತಾರೆ. ಆದರೆ, ನನಗೆ ಅನಿಸುವುದು ದೇವರಿಗೆ ಇಷ್ಟೇ ಸಾಕಾಗುವುದಿಲ್ಲ, ದೇವರನ್ನು ಒಲಿಸಿಕೊಳ್ಳಲು ಉಗ್ರ ತಪಸ್ಸು ಕೈಗೊಳ್ಳಬೇಕು, ಅಂದಾಗ ಮಾತ್ರ ದೇವರು ಒಲಿದು ನಮ್ಮ ಇಷ್ಟಾರ್ಥವನ್ನು ಪೂರೈಸಬಹುದು ಎಂದು ನನಗೆ ಅನಿಸುತ್ತದೆ. ಆದ್ದರಿಂದ ತಪಸ್ಸು ಮಾಡಿ ದೇವರನ್ನು ಒಲಿಸಿಕೊಳ್ಳಬೇಕು ಅನ್ನುವ ವಿಚಾರ ನನ್ನಲ್ಲಿ ಮೇಲಿಂದ ಮೇಲೆ ಬರತೊಡಗಿದೆ.

ಈ ದೇವರು, ದೇವಮಾನವರ ಕಾಲವೆಲ್ಲ ತ್ರೇತಾಯುಗ, ದ್ವಾಪರಯುಗಕ್ಕೆ ಅಂತ್ಯಗೊಂಡಿತು, ಕೃಷ್ಣನ ಅವಸಾನದೊಂದಿಗೆ ಕಲಿಯುಗ ಪ್ರಾರಂಭವಾಯಿತು. ಇಂದಿನ ಕಲಿಯುಗ ನೈತಿಕ ಮತ್ತು ಆಧ್ಯಾತ್ಮಿಕ ಅವ್ಯವಸ್ಥೆಯ ಸರ್ವೋತ್ತರ ಯುಗವೆಂದು ಹೇಳಲಾಗುತ್ತದೆ. ಆದ್ದರಿಂದ ದೇವರುಗಳೆಲ್ಲ ಗತಿಸಿ ಹೋಗಿರುವುದರಿಂದ ಈಗ ದೇವರ ಪೂಜಿಸಿ ಫಲವಿಲ್ಲ ಎಂದು ಅನೇಕರು ದೇವರ ವಿಷಯ ಕುರಿತು ಮಾತನಾಡುವಾಗ ಕೇಳಿದ್ದೇನೆ. ಯಾವ ದೇವರ ಗೊಡವೆ ಇಲ್ಲದೆ ನೆಮ್ಮದಿಯಾಗಿ ಬದುಕಿರುವವರು ಸಾಕಷ್ಟು ಜನ ಇದ್ದಾರಲ್ಲವೇ. ಅಲ್ಲಮನಂತಹ ಜ್ಞಾನಿ 'ನಾ ದೇವನಲ್ಲದೆ ನೀ ದೇವನೆ' ಎಂದು ಅಂದಿಲ್ಲವೇ. ಎಂದೂ ಗುಡಿ, ಗುಂಡಾರಗಳಿಗೆ ಹೋಗದ ಅನೇಕ ಮಹನೀಯರನ್ನು ನಾವು ನೋಡಿಲ್ಲವೇ? ಕೆಲವರಿಗೆ ದಿನಾಲೂ ಹೊಟ್ಟೆ ಹೊರೆಯುವುದೇ ದೊಡ್ಡ ಸಮಸ್ಯೆಯಾಗಿರುವಾಗ, ಹೊಟ್ಟೆ ತುಂಬಿರುವವರಿಗೆ ಮಾತ್ರ ದೇವರು ಕುರಿತು ಸಾವಿರಾರು ನಂಬಿಕೆ, ವಿಚಾರಗಳು ಇವೆ ಎಂದು ಕೇಳಿದ್ದೇನೆ, ನೋಡಿದ್ದೇನೆ.

ಇಂಥ ಎಲ್ಲ ವಿಚಾರಗಳು ತಲೆಯಲ್ಲಿ ತುಂಬಿರುವಾಗ ದೇವರನ್ನು ಒಲಿಸಿಕೊಳ್ಳುವ ಕುರಿತು ನಾನು ತಪಸ್ಸು ಮಾಡುವುದು ಹೇಗೆ ಎಂದು ಅನುಮಾನಿಸುತ್ತಿದ್ದೇನೆ. ಏಕೆಂದರೆ ದೇವರು ಅಪೇಕ್ಷಿಸುವುದು ಅಚಲ ಭಕ್ತಿ ಮತ್ತು ಶ್ರದ್ಧೆ, ನಿಷ್ಠೆಗಳನ್ನು ಎಂದು ಹೇಳಲಾಗುತ್ತದೆ. ಸಂಶಯದ ಬೀಜವನ್ನು ಮನದಲ್ಲಿಟ್ಟುಕೊಂಡು ತಪಸ್ಸು ಮಾಡಿದರೆ ದೇವರು ಒಲಿಯುವನೇ, ವರ ನೀಡುವನೇ ಎಂಬ ಸಂಶಯ ಕೂಡ ಇದೆ. ಮೊದಲೆಲ್ಲಾ ಕಾಡುಮೇಡು ಸೇರಿ, ಹಿಮಾಲಯ ಏರಿ, ದೀರ್ಘ ತಪಸ್ಸು ಮಾಡಿ, ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದರಂತೆ. ತಪಸ್ಸಿನ ಕಾಲಕ್ಕೆ ಊಟ ಉಪಚಾರದ ವ್ಯವಸ್ಥೆ ಹೇಗಿತ್ತು, ಅಷ್ಟು ವರ್ಷ ತಪಸ್ಸು ಮಾಡಿ ಹೇಗೆ ಜೀವಂತವಾಗಿರುತ್ತಿದ್ದರು, ತಪಸ್ಸು ಭಂಗ ಮಾಡಲು ಅಥವಾ ಪರೀಕ್ಷಿಸಲು ಆಗ ದೇವರು ರಂಭೆ, ಊರ್ವಶಿ, ಮೇನಕೆಯರಂಥ ಸುರಸುಂದರಿಯರನ್ನು ಕಳಿಸುತ್ತಿದ್ದರಂತೆ. ಈಗಲೂ ಅಂತಹ ಪ್ರಲೋಭನೆಗಳು ಇವೆಯೋ ಹೇಗೆ? ಇದ್ದರೆ ಅಂತಹ ಪ್ರಲೋಭನೆಗಳನ್ನು ದಾಟುವ ಕುರಿತು ಕೂಡ ಚಿಂತಿಸಬೇಕಲ್ಲವೇ?. ತಪಸ್ಸಿನ ಅವಧಿ, ದೇವರು ಪ್ರತ್ಯಕ್ಷವಾಗಿ ಒಲಿಯುವ ಅವಧಿ ಯಾವುದೂ ನಿಶ್ಚಿತವಿಲ್ಲ. ಆದರೂ ಕೂಡ ಲೋಕಕಲ್ಯಾಣಕ್ಕಾಗಿ ತಪಸ್ಸು ಮಾಡಬೇಕು ಎಂದು ನನ್ನ ಮನಸ್ಸು ಹೇಳುತ್ತಿದೆ. ನನ್ನ ತಪಸ್ಸಿಗೆ ಯಾವುದೇ ಸ್ವಾರ್ಥ ಉದ್ದೇಶವಿಲ್ಲ. ದೇವರು ಒಲಿದು ಪ್ರತ್ಯಕ್ಷನಾದರೆ ನಾನು ಕೇಳಲಿರುವ ವರಗಳ ಕುರಿತು ನನ್ನೊಳಗೆ ಚಿಂತನ ಮಂಥನ ನಡೆಯುತ್ತಿದೆ. 'ಅತಿಯಾಸೆ ಗತಿ ಗೆಡಿಸಿತು' ಎಂಬಂತೆ ಆಗಬಾರದು, ದೇವರಿಂದ ಕೆಲವೇ ಗಟ್ಟಿ ವರ ಪಡೆಯುವುದು ಉಚಿತ ಎಂದು ಅಂದುಕೊಂಡಿದ್ದೇನೆ. ಮಹಾಭಾರತದ ಯುದ್ಧದ ಕೊನೆಯಲ್ಲಿ ಅಶ್ವತ್ಥಾಮನ ತಪಸ್ಸಿಗೆ ಮೆಚ್ಚಿ ದೇವರು ಮೂರೇ ದಿನಗಳಲ್ಲಿ ಪ್ರತ್ಯಕ್ಷನಾಗಿ ವರ ನೀಡಿದ್ದು ಕೇಳಿದ್ದೇನೆ. ನನ್ನ ವಿಷಯದಲ್ಲಿಯೂ